**ಕರ್ನಾಟಕ ಸರ್ಕಾರ**

ಸಂಖ್ಯೆ: ಸಕನಿ/ಸಿಬ್ಬಂದಿ-8/ಸಿಆರ್-06/2019-20

ಸಮಾಜ ಕಲ್ಯಾಣ ಆಯುಕ್ತರ ಕಛೇರಿ,
5ನೇ ಮಹಡಿ, ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ : 04-5-2019

**ಅಧಿಕೃತ ಜ್ಞಾಪನಾ**

ವಿಷಯ:- ಸಮಾಜ ಕಲ್ಯಾಣ ಇಲಾಖೆಯ ಜೂನಿಯರ್ ವಾರ್ಡನ್ ವೃಂದದ ಹೈದ್ರಾಬಾದ್-ಕರ್ನಾಟಕ ಸ್ಥಳೀಯ ವೃಂದ, ಉಳಿಕೆ ಮೂಲ ವೃಂದ ಹಾಗೂ ಮೂಲ ವೃಂದ (ಹೈದ್ರಾಬಾದ್-ಕರ್ನಾಟಕ ಸ್ಥಳೀಯ ವೃಂದ ಮತ್ತು ಉಳಿಕೆ ಮೂಲ ವೃಂದಗಳ ಜಂಟಿ ವೃಂದ) ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ದಿನಾಂಕ 01-01-2019 ರಲ್ಲಿದ್ದಂತೆ ಪ್ರಕಟಿಸುವ ಬಗ್ಗೆ

ಉಲ್ಲೇಖ:-
1) ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತೆ) ನಿಯಮಗಳು 1957
2) ಸರ್ಕಾರದ ಅಧಿಕೃತ ಜ್ಞಾಪನಾ ಸಂಖ್ಯೆ: ಸಿಆಸುಇ 07 ಸೆನೆನಿ 96 ದಿನಾಂಕ 16-07-96
3) ಸರ್ಕಾರದ ಅಧಿಕೃತ ಜ್ಞಾಪನಾ ಸಂಖ್ಯೆ: ಸಿಆಸುಇ 32 ಸೆನೆನಿ 03 ದಿನಾಂಕ 10-06-03
4) ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 06 ಪಿಎಲ್ಎಕ್ಸ್ ದಿನಾಂಕ 06-11-2013
5) ಸರ್ಕಾರದ ಅಧಿಸೂಚನೆ-I ಸಂಖ್ಯೆ: ಡಿಪಿಎಆರ್ 43 ಹೆಚ್‌ಕೆಸಿ 2013 ದಿನಾಂಕ 29-01-2014

**********

ಕರ್ನಾಟಕ ಸರ್ಕಾರಿ ನೌಕರರ (ಜೇಷ್ಟತೆ) ನಿಯಮ 1957 ರ ನಿಯಮ 10 ರನ್ವಯ ಪ್ರತಿ ವರ್ಷ ಜೇಷ್ಟತಾ ಪಟ್ಟಿಯನ್ನು ಪ್ರಕಟಿಸಬೇಕಾಗಿರುತ್ತದೆ. ಉಲ್ಲೇಖ (2) & (3) ರ ಸರ್ಕಾರದ ಅಧಿಕೃತ ಜ್ಞಾಪನಾಗಳನ್ವಯ ದಿನಾಂಕ 01-01-2019 ರಲ್ಲಿದ್ದಂತೆ ಜೇಷ್ಟತಾ ಪಟ್ಟಿಯನ್ನು ಪ್ರಕಟಿಸಬೇಕಾಗಿರುತ್ತದೆ.

ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕೆ ಸಂಬಂಧಿಸಿದಂತೆ, ಉಲ್ಲೇಖ (4) ಮತ್ತು (5) ರ ಸಿಬ್ಬಂದಿ & ಆಡಳಿತ ಸುಧಾರಣಾ ಇಲಾಖೆರವರ ಅಧಿಸೂಚನೆಗಳನ್ವಯ ಸ್ಥಳೀಯ ವೃಂದ, ಉಳಿಕೆ ಮೂಲ ವೃಂದ ಮತ್ತು ಮೂಲ ವೃಂದ (ಹೈದರಾಬಾದ್-ಕರ್ನಾಟಕ ಪ್ರದೇಶ ಹಾಗೂ ಉಳಿಕೆ ಮೂಲ ವೃಂದದ ಜಂಟಿ ವೃಂದ) ದ ಜೇಷ್ಟತಾ ಪಟ್ಟಿಗಳನ್ನು ಪ್ರತಿ ವೃಂದದಲ್ಲಿ ನಿರ್ವಹಿಸಬೇಕಾಗಿರುತ್ತದೆ.

ಸಮಾಜ ಕಲ್ಯಾಣ ಇಲಾಖೆಯ ಜೂನಿಯರ್ ವಾರ್ಡನ್ ವೃಂದಗಳ ಹೈದ್ರಾಬಾದ್-ಕರ್ನಾಟಕ ಸ್ಥಳೀಯ ವೃಂದ-ಅನುಬಂಧ 1, ಉಳಿಕೆ ಮೂಲ ವೃಂದ-ಅನುಬಂಧ 2 ಹಾಗೂ ಮೂಲ ವೃಂದ (ಹೈದ್ರಾಬಾದ್-ಕರ್ನಾಟಕ ಸ್ಥಳೀಯ ವೃಂದ ಮತ್ತು ಉಳಿಕೆ ಮೂಲ ವೃಂದಗಳ ಜಂಟಿ ವೃಂದ) ಅನುಬಂಧ-3 ರಲ್ಲಿ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ದಿನಾಂಕ 01-01-2019 ರಲ್ಲಿದ್ದಂತೆ ಇಲಾಖಾ ವೆಬ್‌ಸೈಟ್ www.sw.kar.nic.in ನಲ್ಲಿ ಪ್ರಕಟಿಸಿದೆ. ಈ ತಾತ್ಕಾಲಿಕ ಜೇಷ್ಠತಾ ಪಟ್ಟಿಗಳನ್ನು ಇ-ಮೇಲ್ ಮೂಲಕ ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಡಾ: ಬಿ.ಆರ್. ಅಂಬೇಡ್ಕರ್ ಸಂಶೋಧನಾ ಸಂಸ್ಥೆ, ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು / ಬುಡಕಟ್ಟುಗಳ ಆಯೋಗ, ಪರೀಕ್ಷಾ ಪೂರ್ವ ತರಬೇತಿ ಸಂಸ್ಥೆ, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ, ಎಲ್ಲಾ ಜಿಲ್ಲೆಗಳ

ಜಂಟಿ / ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಯೋಜನಾ ಸಮನ್ವಯಾಧಿಕಾರಿಗಳು, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು ಹಾಗೂ ಎಲ್ಲಾ ತಾಲ್ಲೂಕುಗಳ ಸಹಾಯಕ ನಿರ್ದೇಶಕರು, ಗ್ರೇಡ್-1 & 2, ಸಮಾಜ ಕಲ್ಯಾಣ ಇಲಾಖೆ ರವರುಗಳಿಗೆ ಕಳುಹಿಸಲಾಗಿದೆ.

ಸಂಬಂಧಿಸಿದ ಅಧಿಕಾರಿಗಳು ಇಲಾಖಾ ವೆಬ್‌ಸೈಟ್‌ನಿಂದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಡೌನ್‌ಲೋಡ್ ಮಾಡಿಕೊಂಡು, ಪ್ರತಿಗಳನ್ನು ಮಾಡಿಸಿ ದಿನಾಂಕ 15-5-2019 ರ ಒಳಗಾಗಿ ತಮ್ಮ ಅಧೀನದಲ್ಲಿ ಬರುವ ಸಂಬಂಧಿಸಿದ ಎಲ್ಲಾ ನೌಕರರಿಗೆ ಜಾರಿ ಮಾಡುವುದು. ತದನಂತರ ಸಂಬಂಧಿಸಿದ ಅಧಿಕಾರಿಗಳು ಈ ಕುರಿತು ನೌಕರರಿಂದ ಸ್ವೀಕರಿಸಿದ ಆಕ್ಷೇಪಣೆಗಳನ್ನು ನೌಕರರ ಸೇವಾ ವಹಿಯೊಂದಿಗೆ ಪರಿಶೀಲಿಸಿ ನ್ಯೂನತೆ / ಆಕ್ಷೇಪಣೆಗಳ ಬಗ್ಗೆ ಷರಾ ನಮೂದಿಸಿ ಆಕ್ಷೇಪಣೆಗಳನ್ನು ನಮೂನೆ 'ಡಿ' ರಲ್ಲಿ ಪಟ್ಟಿ ಮಾಡಿ ಹಾಗೂ ನಿವೃತ್ತಿ ಹೊಂದಿದವರು, ಮರಣ ಹೊಂದಿದವರು, ಇಲಾಖೆ ಬಿಟ್ಟಿರುವವರು ಇತ್ಯಾದಿ ವಿವರಗಳನ್ನು ನಮೂದಿಸತಕ್ಕದ್ದು.

ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು / ಬುಡಕಟ್ಟುಗಳ ಆಯೋಗ, ಡಾ: ಬಿ.ಆರ್. ಅಂಬೇಡ್ಕರ್ ಸಂಶೋಧನಾ ಸಂಸ್ಥೆ, ಪರೀಕ್ಷಾ ಪೂರ್ವ ತರಬೇತಿ ಸಂಸ್ಥೆ, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ, ಎಲ್ಲಾ ಜಿಲ್ಲೆಗಳ ಜಂಟಿ / ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಯೋಜನಾ ಸಮನ್ವಯಾಧಿಕಾರಿಗಳು, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು ಸ್ವೀಕರಿಸಿದ ಆಕ್ಷೇಪಣೆಗಳನ್ನು ಕ್ರೋಢೀಕರಿಸಿ, ದೃಢೀಕರಣದೊಂದಿಗೆ ದಿನಾಂಕ: 31-5-2019 ರೊಳಗೆ ಈ ಕಛೇರಿಗೆ ಮುದ್ದಾಂ ಸಲ್ಲಿಸಲು ಸೂಚಿಸಿದೆ. ನಿಗಧಿತ ದಿನಾಂಕದ ನಂತರ ಸ್ವೀಕೃತಗೊಳ್ಳುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಆಯುಕ್ತರು,
ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.

ಪ್ರತಿಯನ್ನು:-

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
2) ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ, ಬೆಂಗಳೂರು.
3) ಎಲ್ಲಾ ಜಿಲ್ಲೆಗಳ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ.
4) ಎಲ್ಲಾ ಜಿಲ್ಲೆಗಳ ಜಂಟಿ / ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ.
5) ಎಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ.
6) ಎಲ್ಲಾ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳಿಗೆ.
7) ಎಲ್ಲಾ ಸಹಾಯಕ ನಿರ್ದೇಶಕರು, ಗ್ರೇಡ್-1 & 2, ಸಮಾಜ ಕಲ್ಯಾಣ ಇಲಾಖೆ.
8) ಸಂಬಂಧಿಸಿದ ನೌಕರರಿಗೆ ಸಂಬಂಧಿಸಿದ ಅಧಿಕಾರಿಗಳ ಮುಖಾಂತರ.
9) ಕಛೇರಿ ಪ್ರತಿ / ಇತರೆ.

# ನಮೂನೆ–'ಡಿ'

ದಿನಾಂಕ 01–01–2019 ರಲ್ಲಿದ್ದಂತೆ ........................................................ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ಆಕ್ಷೇಪಣೆ ಸಲ್ಲಿಸುವ ವಿವರ

| ಕ್ರಸಂ | ಜೇಷ್ಠತಾ ಕ್ರ.ಸಂ | ನೌಕರರ ಹೆಸರು ಮತ್ತು ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳ ಶ್ರೀ / ಶ್ರೀಮತಿ | ಆಕ್ಷೇಪಣೆ | ಉತ್ತರ |
|---|---|---|---|---|
| | | | | |

ಸಹಿ/–
ಜಂಟಿ / ಉಪ ನಿರ್ದೇಶಕರು,
ಸಮಾಜ ಕಲ್ಯಾಣ ಇಲಾಖೆ,
.................................... ಜಿಲ್ಲೆ.